ಎಚ್ಚರಿಕೆಯ ದನಿಯಾಗಿಸಿ ಎಲ್ಲರಿಗೂ ತಿಳಿಸುತ್ತವೆ.

ಕೊನೆಯದಾಗಿ ವಾಸನೆ. ನಿಮ್ಮ ಮೂಗು ಸೂಕ್ಷ್ಮವಿದ್ದರೆ ಕಾಡಿನೊಳಗೆ ಎಲ್ಲಿ ಏನಾಗಿದೆ? ಎನ್ನುವುದನ್ನು ಒಂದು ಅಂದಾಜಲ್ಲಿ ನಿರ್ಧರಿಸಿ ಹೇಳಬಹುದು. ಒಮ್ಮೆ ಹೀಗೆ ಆಯಿತು. ಒಂದು ಸಂಜೆ ಮಂಜು ಮೂಗಿಗೆ ಶಿಕಾರಿಯಾದ ಮಾಲಿನ ಪಕ್ಕಾ ಸ್ಥಳ ಗೊತ್ತಾಗಿ ಹೋಗಿತ್ತು. ಆ ರಾತ್ರಿಯೇ ನನಗೆ ಫೋನ್ ಮಾಡಿದ. ಅವನ ಪ್ರಕಾರ ಈ ಶಿಕಾರಿ ನಡೆದಿರುವುದು ಎರಡು ಪ್ರಣಯ ಜೋಡಿ ಚಿರತೆಗಳಿಂದ. ಚಳಿಗಾಲ ಶುರುವಾದಾಗ ಹೊಸ ಜೀವನ ಶುರು ಮಾಡುವ ಚಿರತೆಗಳು ಜೊತೆಯಾಗಿ ಬೇಟೆಯಾಡುತ್ತವೆ. ಜಂಟಿಯಾಗಿ ಕಾರ್ಯಾಚರಣೆ ನಡೆಸಿ ತಮಗಿಷ್ಟವಾದ ಪ್ರಾಣಿಯನ್ನು ಕೊಲ್ಲುತ್ತವೆ.

ಇದನ್ನು ಪ್ರಣಯ ಚೇಷ್ಟೆ ಅಥವಾ ಪ್ರಣಯ ಕಾಲದ ಸಾಹಸ ಎಂದೂ ಕರೆಯಬಹುದು. ಬೆದೆಗೆ ಬಂದವರು ಗುದ್ದಿ ನೀರು ತೆಗೆಯುವಂತೆ ಈ ಚಿರತೆಗಳು ಬೇಟೆಯಲ್ಲಿ ತಮ್ಮ ಅಟ್ಟಹಾಸ ತೋರಿಸುತ್ತವೆ. 'ಪಕ್ಕಾ ಜಿಂಕೇನ ಕೊಂದು ಮರದ ಮೇಲೆ ನೇತಾಕಿಕೊಂಡಿದ್ದಾವೆ ಸರ್. ಆ ಜಾಗ ಬಿಟ್ಟು ಕದಲ್ತಾ ಇಲ್ಲ. ಅಲ್ಲೇ ಸುತ್ತಮುತ್ತ ಕಾವಲು ಹಾಕಿದ್ದಾವೆ. ಹಸಿರಕ್ತದ ವಾಸನೆ ಬಡೀತಾ ಇದೆ. ನೊಣ ಗುಂಯ್ ಅಂತಿದ್ದಾವೆ. ಬೆಳಗ್ಗೆನೇ ಬೇಗ ಅಲ್ಲಿದ್ರೆ ಗ್ಯಾರಂಟಿ ಚಿರತೆ ಸಿಕ್ಕೇ ಸಿಗ್ತಾವೆ. ನೀವು ಯಾವುದಕ್ಕೂ ಬೇಗ ಬಂದು ಬಿಡಿ' ಎಂದು ಹೇಳಿದ.

ಎದ್ದು ಬಿದ್ದು ಓಡಿ ನಸುಕು ಹರಿಯುವ ಮುನ್ನವೇ ಕಾಡ ಮಡಿಲಿಗೆ ಬಿದ್ದೆವು. ಚುಮುಚುಮು ಚಳಿಯಲ್ಲಿ ಆತ ಜೀಪಿನಲ್ಲಿ ನಮ್ಮನ್ನು ಅತ್ತ ಕರೆದುಕೊಂಡು ಹೋದ. ಮಂಜು ಇನ್ನೂ ಬೀಳುತ್ತಿದ್ದ ಕಾರಣ ಕಾಡು ಒದ್ದೆಯಾಗಿ ನೋಟ ಅಸ್ಪಷ್ಟವಾಗಿತ್ತು. ಬಿಳಿಮಂಜು ಹೆಚ್ಚಿದ್ದಾಗ ಪಟ ತೆಗೆಯುವುದು ಕೊಂಚ ಕಷ್ಟ. ಜೊತೆಗೆ ಕ್ಯಾಮೆರಾ ಲೆನ್ಸಿನ ಮೇಲೆ ಮಂಜಿನ ಪರದೆ ಕವಿದರೆ ಅದೂ ಯಡವಟ್ಟೇ. ಇಂತಹ ಪರಿಸ್ಥಿಯಲ್ಲಿ ಕ್ಯಾಮೆರಾಗಳು ಫಂಗಸ್ ಬಂದು ಹಾಳಾಗುವ ಅಪಾಯವೇ ಹೆಚ್ಚು. ಮಳೆ ನೀರು, ಥಂಡಿ, ಮಂಜಿನ ಹೊಡೆತ, ಮತ್ತು ಕತ್ತಲೆಯಿಂದ ಲೆನ್ಸು ಮತ್ತು ಕ್ಯಾಮೆರಾಗಳ ಮಾನ ಪ್ರಾಣ ಕಾಪಾಡಿಕೊಳ್ಳುವುದು ಒಂದು ಕಸರತ್ತು.

ಅವು ಬೇಟೆಯಾಡಿದ ಜಾಗ ತಲುಪಿ ಶಬ್ದ ಮಾಡದೆ ಸುಮ್ಮನೆ ಕೆಲ ಹೊತ್ತು ಕಾದೆವು. ಆಗ ಒಂದು ಮರದ



ಬುಡದಲ್ಲಿ ಸಣ್ಣಗೆ ಶಬ್ದವಾಯಿತು. ನಾನು ಅದನ್ನು ಮುಂಗುಸಿ ಇರಬಹುದೆಂದು ಭಾವಿಸಿದೆ. ಆದರೆ ಅಲ್ಲಾಡುತ್ತಿದ್ದ ಬಾಲ ತುಂಬಾ ಚುರುಕಾಗಿತ್ತು. ಆಗಲೇ ನಮಗೆ ಗೊತ್ತಾಗಿದ್ದು! ಚಿರತೆ ಮರದ ಹಿಂದೆ ಕೂತು ನಮ್ಮನ್ನೇ ಗಮನಿಸುತ್ತಿದೆ ಎಂದು. ಅದು ಕೊಂಚ ಎದ್ದು ಈಚೆಗೆ ಬರಲಿ ಎಂದು ಮತ್ತೆ ಕಾಯುತ್ತಾ ಕುಳಿತವು.

ಅಷ್ಟರಲ್ಲಿ ಅದರ ಮತ್ತೊಂದು ಸಂಗಾತಿ ದೂರದಲ್ಲಿತ್ತು ಎಂದು ಕಾಣಿಸುತ್ತದೆ. ಒಮ್ಮೆಲೇ ಅದು ಯಾಕೋ ಅಬ್ಬರಿಸಿತು. ತಕ್ಷಣ ಅದಕ್ಕೆ ಪ್ರತ್ಯುತ್ತರವಾಗಿ ಇದೂ ಕೂಗಿತು. ಇವುಗಳ ಭಾಷೆಯಲ್ಲಿ 'ಲೇ.. ಯಾರೋ ಬಂದಿದ್ದಾರೆ ಹುಷಾರಾಗಿರು" ಎಂಬ ಸೂಚನೆಯೂ ಇರಬಹುದು. ಅಥವಾ ಬೇಟೆಯ ಮೇಲೆ ನಿಗಾ ಇಟ್ಟಿರು ಎಂಬ ಎಚ್ಚರಿಕೆಯೂ ಅದು ಇದ್ದೀತು. ಮುಂದೆ ಅವೆರಡು ಹತ್ತಿರವಾದವು. ತಮ್ಮ ಮುಂದೆ ಬೆಳೆದು ನಿಂತಿದ್ದ ಎತ್ತರದ ತೇಗದಮರವನ್ನು ಆಗಾಗ ತೀಕ್ಷ್ಣವಾಗಿ ಗಮನಿಸತೊಡಗಿದವು. ಹೀಗೆ ಮತ್ತೆ ಮತ್ತೆ ಅವು ಮರವನ್ನು ದಿಟ್ಟಿಸಿ ನೋಡಿದ್ದರಿಂದ ನಮ್ಮ ಗಮನವೂ ಅತ್ತ ಹೋಯಿತು. ಅಲ್ಲಿ ನೋಡಿದರೆ ಏನೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಬೈನಾಕುಲರ್ ಬಳಸಿದರೂ ಪ್ರಯೋಜವಾಗಲಿಲ್ಲ. ಪ್ರಾಯಶಃ ತಾವು ಬಚ್ಚಿಟ್ಟ ಶಿಕಾರಿಯ ಮಾಲು ಇರುವಲ್ಲಿಯೇ ಸರಿಯಾಗಿದೆಯೋ? ಇಲ್ಲವೋ? ಎಂದು ಅವು ಖಾತ್ರಿಪಡಿಸಿಕೊಳ್ಳುತ್ತಿವೆ ಎನ್ನುವುದಂತೂ ಮನದಟ್ಟಾಯಿತು.

'ಇವು ಇನ್ನೂ ಎರಡು ದಿನ ಶಿಕಾರಿ ಮಾಲು